No:Compt/Uplok/BCD-2186/2017/ARLO-1

**ಕರ್ನಾಟಕ ಲೋಕಾಯುಕ್ತ, ಬೆಂಗಳೂರು.**

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಸಿಡಿ–2186/2017/ಎ.ಆರ್.ಎಲ್.ಒ–1. ದಿನಾಂಕ: 19–04–2022.

**ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ವರದಿ**

**ವಿಷಯ:–** ಎದುರುದಾರರಾದ (1) ಶ್ರೀ ರಾಥೋಡ್, ಸಹಾಯಕ ಕಾರ್ಯಪಾಲಕ ಅಭಿಯಂತರು, (2) ಶ್ರೀ ಪ್ರದೀಪ್, ಕಿರಿಯ ಅಭಿಯಂತರರು ಮತ್ತು (3) ಶ್ರೀ ಸಿ. ಲಿಂಗಯ್ಯ, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರು ದುರ್ನಡತೆ ಎಸಗಿರುವ ಬಗ್ಗೆ.

******

ಶ್ರೀ ಶರಣು ಎಂ. ನಂ:82/2, 1ನೇ ಮುಖ್ಯ ರಸ್ತೆ, ರಾಘವೇಂದ್ರ ಬಡಾವಣೆ, ಶ್ರೀನಗರ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು ಎದುರುದಾರರಾದ (1) ಶ್ರೀ ರಾಥೋಡ್, ಸಹಾಯಕ ಕಾರ್ಯಪಾಲಕ ಅಭಿಯಂತರು, (2) ಶ್ರೀ ಪ್ರದೀಪ್, ಕಿರಿಯ ಅಭಿಯಂತರರು, (3) ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು, (4) ಶ್ರೀ ಸಿ. ಲಿಂಗಯ್ಯ, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ಮತ್ತು (5) ಶ್ರೀ ರಾಮದಾಸ್, ಹಿಂದಿನ ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯದಲ್ಲಿ ದುರ್ನಡತೆ ಎಸಗಿರುವ ಬಗ್ಗೆ ಸೂಕ್ತ ವಿಚಾರಣೆ ಮಾಡಿ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. **ದೂರಿನ ಸಂಕ್ಷಿಪ್ತ ವಿವರ:-** ದೂರುದಾರರ ಆಪಾದನೆ ಏನೆಂದರೆ, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಸುಂಕೆನಹಳ್ಳಿ ವಾರ್ಡ್ ನಂ:142, ಮುನ್ಸಿಪಲ್ ಸಂಖ್ಯೆ:23, ಮೌಂಟ್ ಜಾಯ್ ರಸ್ತೆ, ಹನುಮಂತನಗರ, ಬೆಂಗಳೂರು ರ ಸ್ವತ್ತಿನ ವಿಳಾಸದ ಸ್ಥಳದ ವಿಸ್ತೀರ್ಣ 2400 ಅಡಿಗಳು. ಆದರೆ, ಕ್ರಯ ಪತ್ರವನ್ನು 1820 ಅಡಿಗಳಿಗೆ ಪಡೆದಿರುತ್ತಾರೆ. ಉಳಿಕೆ ಜಾಗ 580 ಅಡಿ ಮೂಲ ಮಾಲೀಕರ ಸ್ವತ್ತಾಗಿರುತ್ತದೆ. ಕ್ರಯ ಪತ್ರದ ಮೂಲಕ ಪಡೆದಿರುವ ಸ್ವತ್ತುಗಳ ವಿವರಗಳನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

i. ಶ್ರೀಮತಿ ಎಂ.ಪಿ. ಜಯಶ್ರೀ ಮತ್ತು ಶ್ರೀಎಂ.ಪಿ. ಜಯಲಕ್ಷ್ಮಿ, 510 ಅಡಿಗಳು

ii. ಶ್ರೀಮತಿ ಎಂ.ಪಿ. ಜಯಶ್ರೀ ಮತ್ತು ಶ್ರೀಮತಿ ಎಂ.ಪಿ. ಜಯಲಕ್ಷ್ಮಿ 200 ಅಡಿಗಳು

iii. ಶ್ರೀ ಎಂ.ಪಿ. ಪ್ರವೀಣ್ 400 ಅಡಿಗಳು.

iv. ಶ್ರೀಮತಿ ಎಂ.ಪಿ. ಜಯಶ್ರೀ ಮತ್ತು ಶ್ರೀಮತಿ ಎಂ.ಪಿ. ಜಯಲಕ್ಷ್ಮಿ 200 ಅಡಿಗಳು

v. ಶ್ರೀಮತಿ ಎಂ.ಪಿ. ಜಯಶ್ರೀ ಮತ್ತು ಶ್ರೀಮತಿ ಎಂ.ಪಿ. ಜಯಲಕ್ಷ್ಮಿ 510 ಅಡಿಗಳು

**ಒಟ್ಟು 1820 ಅಡಿಗಳು**

3. ದೂರುದಾರರ ಮುಂದುವರೆದ ಆಪಾದನೆ ಏನೆಂದರೆ, ಮೇಲೆ ತಿಳಿಸಿರುವ ಜಾಗದ ವಿಸ್ತೀರ್ಣ ಹಾಗೂ ದಾಖಲೆಗಳನ್ನು ಗಮನಿಸಿದರೆ, 2400 ಅಡಿಗಳು ಇರುವುದಿಲ್ಲ. ಆದರೆ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ .ರಾಥೋಡ್/ 1ನೇ ಎದುರುದಾರರು ಮತ್ತು ಕಿರಿಯ ಅಭಿಯಂತರರಾದ ಶ್ರೀ ಪ್ರದೀಪ್/2ನೇ ಎದುರುದಾರರು ದಾಖಲೆಗಳನ್ನು/ಕ್ರಯ ಪತ್ರಗಳನ್ನು ಪರಿಶೀಲನೆ ಮಾಡದೇ ಲಂಚದ ಆಸೆಗೆ ಅಕ್ರಮವಾಗಿ 40 X 60=2400 ಅಡಿಗಳಿಗೆ ಮಂಜೂರಾತಿ ನಕ್ಷೆ ನೀಡಿರುವುದು ಕಂಡುಬಂದಿರುತ್ತದೆ ಎಂದು ಆರೋಪಿಸಿರುತ್ತಾರೆ.

4. ಇದರಿಂದ ಸರ್ಕಾರ ಹಾಗೂ ಪಾಲಿಕೆ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿ ಕರ್ತವ್ಯಲೋಪವೆಸಗಿ ಸರ್ಕಾರ ಹಾಗೂ ಪಾಲಿಕೆ ಹಿತಾಸಕ್ತಿಯ ವಿರುದ್ಧ

ಕಾರ್ಯನಿರ್ವಹಿಸಿರುವುದು ದಾಖಲೆಗಳ ಮೂಲಕ ಕಂಡುಬಂದಿರುತ್ತದೆಂದು ಆರೋಪಿಸಿರುತ್ತಾರೆ.

5. 1ನೇ ಎದುರುದಾರರಾದ ಶ್ರೀ ರಾಥೋಡ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರು ತಮ್ಮ ದಿನಾಂಕ:17-1-2018 ರ ಆಕ್ಷೇಪಣೆಯಲ್ಲಿ, ಪ್ರಸ್ತುತ ದೂರು ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರಾದ ಶ್ರೀಮತಿ ಎಂ.ಪಿ.ಜಯಶ್ರೀ, ಶ್ರೀಮತಿ ಎಂ.ಪಿ. ಜಯಲಕ್ಷ್ಮಿ ಮತ್ತು ಶ್ರೀ ಎಂ.ಪಿ. ಪ್ರವೀಣ್ ರವರು ತಮ್ಮ ಕಛೇರಿಗೆ ಸಲ್ಲಿಸಿರುವ ದಾಖಲೆಗಳ ಅನುಸಾರ ದಿನಾಂಕ:09-03-2016 ರಂದು ನಕ್ಷೆ ಮಂಜೂರಾತಿಗಾಗಿ ಕೋರಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಮೂಲ ಕ್ರಯಪತ್ರದ ಪ್ರಕಾರ ಬ್ಯೂಗಲ್ ರಾಕ್ ರಸ್ತೆಯ 23ನೇ ಸಂಖ್ಯೆಯ ಸ್ವತ್ತು ಮೂಲತ: ಸುಂಕೇನಹಳ್ಳಿ ಸರ್ವೆ ನಂ:5 ಮತ್ತು 7ರ ಜಮೀನಿನಲ್ಲಿನ ಪ್ರದೇಶದ ಜಮೀನನ್ನು ಶ್ರೀಮನಜಿ ದೋಂಡುಸಾ ರವರು ಖರೀದಿಸಿ ನಿಯಮಾನುಸಾರ ಅಂದಿನ ಸಿ.ಐ.ಟಿ.ಬಿ. ವತಿಯಿಂದ ಅನುಮೋದನೆ ಪಡೆದು ಬಡಾವಣೆ ನಿರ್ಮಿಸಿದ್ದರನ್ವಯ 5ನೇ ಸಂಖ್ಯೆಯ 40 X 60 ಅಡಿಗಳ ಒಟ್ಟು 2400 ಚದರ ಅಡಿಗಳ ನಿವೇಶನವನ್ನು ಶ್ರೀಮನಜಿ ದೋಂಡುಸಾ ರವರಿಂದ ಶ್ರೀ ಕೆ.ಎಸ್. ಕೃಷ್ಣ ರವರು ದಿನಾಂಕ:01-05-1960 ರಂದು ಖರಿದೀಸಿದ್ದು ನಂತರ ಅರ್ಜಿದಾರರಾದ ಶ್ರೀಮತಿ ಎಂ.ಪಿ.ಜಯಶ್ರೀ, ಶ್ರೀಮತಿ ಎಂ.ಪಿ.ಜಯಲಕ್ಷ್ಮಿ ಮತ್ತು ಶ್ರೀ ಎಂ.ಪಿ. ಪ್ರವೀಣ್ ರವರು ಸಲ್ಲಿಸಿರುವ ಕ್ರಯ ಪತ್ರಗಳು ಮತ್ತು ದಿನಾಂಕ:23-2-2016 ರ ಖಾತಾ ನಕಲಿನಲ್ಲಿ ಸ್ವತ್ತಿನ ಅಳತೆ 2400 ಅಡಿಗಳೆಂದು ನಮೂದಿಸಿರುತ್ತಾರೆ. ಈ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ ರವರು ದಿನಾಂಕ:02-02-2015 ರಂದು ಕರ್ನಾಟಕ ಮುನ್ಸಿಪಲ್ ಕಾಯ್ದೆ, ಕಲಂ 147 ರಂತೆ ಸದರಿಯವರ ಸ್ವತ್ತುಗಳನ್ನು ಒಂದುಗೂಡಿಸಿ 2400 ಅಡಿಗಳೆಂದು ನಮೂದಿಸಿ ವಿಶೇಷ ಸೂಚನ ಪತ್ರವನ್ನು ಹೊರಡಿಸಿರುತ್ತಾರೆ. ಈ ಎಲ್ಲಾ ದಾಖಲೆಗಳ ಪ್ರಕಾರ ಹಾಗೂ ಸ್ಥಳ ಪರಿಶೀಲನೆ ಪ್ರಕಾರ

ಸದರಿ ಸ್ವತ್ತು 2400 ಅಡಿಗಳಿದ್ದು ದಿನಾಂಕ:31-03-2016 ರಂದು ನಕ್ಷೆ ಮಂಜೂರು ಮಾಡಲಾಗಿರುತ್ತದೆ ಎಂದು ಹೇಳಿರುತ್ತಾರೆ.

6. ದೂರುದಾರರು ತಮ್ಮ ದೂರಿನಲ್ಲಿ ಉಲ್ಲೇಖಿಸಿರುವ ದಿನಾಂಕ:27-05-2016 ರ ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗದ ತಿದ್ದುಪಡಿ ವಿಶೇಷ ಸೂಚನ ಪತ್ರಕ್ಕೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯಿಂದ ತಮ್ಮ ಕಛೇರಿಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ. ದಿನಾಂಕ:02-02-2015 ರ ವಿಶೇಶ ಸೂಚನ ಪತ್ರವನ್ನು ಆಧಾರಿಸಿ ನಕ್ಷೆಯನ್ನು ದಿನಾಂಕ:31-03-2016 ರಂದು ನೀಡಿಢ ನಂತರ ತಿದ್ದುಪಡಿ ವಿಶೇಷ ಸೂಚನ ಪತ್ರವನ್ನು ದಿನಾಂಕ:27-05-2016 ರಂದು ಕಂದಾಯ ಇಲಾಖೆಯಿಂದ ಹೊರಡಿಸಲಾಗಿರುತ್ತದೆ ಎಂದು ಹೇಳಿರುತ್ತಾರೆ. ಹೀಗಾಗಿ ಕಂದಾಯ ಇಲಾಖೆಗಳ ದಾಖಲೆಗಳ ಆಧಾರದ ಮೇಲೆ ಮತ್ತು ತಾವು ಮತ್ತು ತಮ್ಮ ಶಾಖಾಧಿಕಾರಿಯವರು ಜೊತೆಗೂಡಿ ಸ್ಥಳ ಪರಿಶೀಲಿನೆ ಮಾಡಿದ ಪ್ರಕಾರ ಸ್ವತ್ತು 2400 ಅಡಿಗಳಿದ್ದು ನಕ್ಷೆ ಮಂಜೂರಾತಿ ಮಾಡಲಾಗಿರುತ್ತಡೆ. ಈ ಕಾರ್ಯದಲ್ಲಿ ಯಾವುದೇ ರೀತಿಯ ತಪ್ಪು ಎಸಗಿರುವುದಿಲ್ಲ. ಆದ್ದರಿಂದ ದೂರನ್ನು ಮುಕ್ತಾಯಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

7. 2ನೇ ಎದುರುದಾರರಾದ ಶ್ರೀ ಪ್ರದೀಪ್ ಕುಮಾರ್, ಕಿರಿಯ ಅಭಿಯಂತರರು, ವಾರ್ಡ್ ನಂ:142, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರು ತಮ್ಮ ದಿನಾಂಕ:05-12-2017 ರ ಪತ್ರದಲ್ಲಿ 1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ. ಮುಂದುವರೆದು ತಮ್ಮ ಪತ್ರದಲ್ಲಿ ದಿನಾಂಕ: 02-02-2015 ರ ಸಹಾಯಕ ಕಂದಾಯ ಅಧಿಕಾರಿಯವರ ವಿಶೇಷ ಸೂಚನ ಪತ್ರವನ್ನು ಆಧಾರಿಸಿ ನಕ್ಷೆಯನ್ನು ದಿನಾಂಕ:31-03-2016 ರಂದು ನೀಡಲಾಗಿದ್ದು ಅದರ ನಂತರ ಸಹಾಯಕ ಕಂದಾಯ ಅಧಿಕಾರಿಯವರು ತಿದ್ದುಪಡಿ ವಿಶೇಷ ಸೂಚನ ಪತ್ರವನ್ನು ದಿನಾಂಕ:27-5-2016 ರಂದು ಹೊರಡಿಸಿರುತ್ತಾರೆಂದು ಹೇಳಿಕೊಂಡು ಎಲ್ಲಾ

ದಾಖಲೆಗಳ ಪ್ರಕಾರ ಹಾಗೂ ಸ್ಥಳ ಪರಿಶೀಲನೆ ಪ್ರಕಾರ ಸದರಿ ಸ್ವತ್ತು 2400 ಅಡಿಗಳಿದುದ್ದರಿಂದ ದಿನಾಂಕ:31-03-2016 ರಂದು ನಕ್ಷೆ ಮಂಜೂರು ಮಾಡಿರುವುದಾಗಿ ಹೇಳಿಕೊಂಡಿರುತ್ತಾರೆ. ಕಂದಾಯ ಇಲಾಖೆಯಿಂದ ದಿನಾಂಕ: 27-05-2016 ರ ವಿಶೇಷ ಸೂಚನ ಪತ್ರವನ್ನು ಹೊರಡಿಸಿರುವ ಬಗ್ಗೆ ಯಾವುದೇ ಮಾಹಿತಿ ತಮಗೆ ಬಂದಿರುವುದಿಲ್ಲ. ಈ ಬಗ್ಗೆ ಕಂದಾಯ ಇಲಾಖೆಯ ವತಿಯಿಂದ ಸ್ಪಷ್ಟೀಕರಣ ಪಡೆದು ನಂತರ ವಿವರ ನೀಡಲು ಕಾಲಾವಕಾಶ ಕೋರಿರುತ್ತಾರೆ.

8. 2ನೇ ಎದುರುದಾರರು ತಮ್ಮ ದಿನಾಂಕ:04-01-2018 ರ ಆಕ್ಷೇಪಣೆಯಲ್ಲಿ ದಿನಾಂಕ: 07-12-2017 ರಂದು ಕಂದಾಯ ಅಧಿಕಾರಿ ಚಿಕ್ಕಪೇಟೆ ಹಾಗೂ ಸಹ ಕಂದಾಯ ಅಧಿಕಾರಿ, ಕೆಂಪೇಗೌಡನಗರ ರವರು ಹೊರಡಿಸಿದ ವಿಶೇಷ ಸೂಚನ ಪತ್ರ ಹಾಗೂ ತಿದ್ದುಪಡಿ ವಿಶೇಷ ಸೂಚನ ಪತ್ರಗಳ ಬಗ್ಗೆ ಸ್ಪಷ್ಟೀಕರಣ ಕೇಳಿದ್ದು ಆನಂತರ ದಿನಾಂಕ:19-12-2017 ರಂದು ಸಹಾಯಕ ಕಂದಾಯ ಅಧಿಕಾರಿಯವರು ಸ್ವತ್ತಿನ ಮಾಲೀಕರಿಗೆ ಖಾತಾ ಒಂದುಗೂಡಿಸಿರುವ/ ರದ್ದುಗೊಳಿಸುವ ಬಗ್ಗೆ ಪತ್ರ-ವ್ಯವಹಾರ ಮಾಡಿದ್ದು ಇದಕ್ಕೆ ಉತ್ತರವಾಗಿ ಮಾಲೀಕರು ದಿನಾಂಕ:02-08-2018 ರಂದು ಆಕ್ಷೇಪಣೆ/ಸಮರ್ಥನ ಪತ್ರ ಸಹ ಕಂದಾಯ ಅಧಿಕಾರಿಯವರ ಕಛೇರಿಗೆ ಸಲ್ಲಿಸಿರುತ್ತಾರೆ. ಈ ರೀತಿ ಕಂದಾಯ ಇಲಾಖೆಯಲ್ಲಿ ಪ್ರಸ್ತಾಪಿತ ಸ್ವತ್ತಿನ ಬಗ್ಗೆ ನಿಖರವಾದ ತೀರ್ಮಾನ ಕೈಗೊಂಡಿಲ್ಲದೇ ಇರುವ ಕಾರಣ ಈವರೆವಿಗೂ ಯಾವುದೇ ವರದಿ/ಸ್ಪಷ್ಟೀಕರಣ ನೀಡಿರುವುದಿಲ್ಲವೆಂದು ಹೇಳಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿಕೊಂಡಿರತ್ತಾರೆ.

9. 3ನೇ ಎದುರುದಾರರಾದ ಶ್ರೀ ಚಂದ್ರಕಾಂತ/ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಬಿಬಿಎಂಪಿ., ಬೆಂಗಳೂರು ರವರು ತಮ್ಮ ದಿನಾಂಕ:12-10-2018 ರ ಆಕ್ಷೇಪಣೆಯನ್ನು ಸಲ್ಲಿಸಿ ತಾವು ದಿನಾಂಕ:01-04-2017 ರಿಂದ 30-09-2018 ರವರೆಗೆ ಸಹ ಕಂದಾಯ ಅಧಿಕಾರಿಯಾಗಿ ಕೆಂಪೇಗೌಡನಗರ ವಿಭಾಗದಲ್ಲಿ

ಕಾರ್ಯನಿರ್ವಹಿಸಿರುವುದಾಗಿ ಪ್ರಸ್ತುತ ದೂರಿಗೆ ಸಂಬಂಧಪಟ್ಟ ಸ್ವತ್ತಿನ ಖಾತೆಯನ್ನು ಒಂದುಗೂಡಿಸಲು ಅರ್ಜಿ ನೀಡಿದ ಸಮಯದಲ್ಲಿ ಖಾತಾ ಒಂದುಗೂಡಿಸಿ ದಿನಾಂಕ:02-02-2015 ರಂದು ಅರ್ಜಿದಾರರಿಗೆ **4ನೇ ಎದುರುದಾರರಾದ ಸಹಾಯಕ ಕಂದಾಯ ಅಧಿಕಾರಿ ಶ್ರೀ ಲಿಂಗಯ್ಯ** ರವರು ಹಿಂಬರಹ (ವಿಶೇಷ ಸೂಚನ ಪತ್ರ) ನೀಡಿರುತ್ತಾರೆಂದು ಹಾಗೂ ಆನಂತರ ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ವಿಸ್ತೀರ್ಣವನ್ನು ಕಡಿಮೆ ಮಾಡಿ **5ನೇ ಎದುರುದಾರರಾದ ಶ್ರೀರಾಮುದಾಸ್, ಸಹಾಯಕ ಕಂದಾಯ ಅಧಿಕಾರಿಯವರು** ದಿನಾಂಕ:01-06-2016 ರಂದು ಹಿಂಬರಹ ನೀಡಿರುತ್ತಾರೆಂದು ಹೇಳಿರುತ್ತಾರೆ.

10. 4ನೇ ಎದುರುದಾರರಾದ ಶ್ರೀ ಲಿಂಗಯ್ಯ, ಸಹಾಯಕ ಕಂದಾಯ ಅಧಿಕಾರಿಯವರು ತಮ್ಮ ದಿನಾಂಕ:12-12-2018 ರ ಆಕ್ಷೇಪಣೆಯಲ್ಲಿ ಅರ್ಜಿದಾರರು ಸ್ವತ್ತಿನ ಸಂಖ್ಯೆ:23, 23/1, 23/2, 23/3, 23/4 ಹಾಗೂ 23/5 ರ ಬ್ಯೂಗಲ್ ರಾಕ್ ರಸ್ತೆ, ವಾರ್ಡ್ ನಂ:142, ಕೆಂಪೇಗೌಡ ನಗರ ವಿಭಾಗದ ಸ್ವತ್ತಿನ ಖಾತೆಯನ್ನು ವರ್ಗಾಯಿಸಿ ಒಂದುಗೂಡಿಸುವಂತೆ ಕೋರಿ ಸಲ್ಲಿಸಿದ ಅರ್ಜಿಗಳು, ಕ್ರಯ ಪತ್ರದ ದಾಖಲೆಯೊಂದಿಗೆ ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ ಪಂಕ್ತಿ ಸಂಖ್ಯೆ 10 ರಿಂದ 13ರವರೆಗಿನ ಕಂದಾಯ ಪರಿವೀಕ್ಷಕರ ವರದಿಯಂತೆ ಖಾತಾ ವರ್ಗಾವಣೆಯನ್ನು ಅನುಮೋದಿಸಿ ಖಾತಾ ವರ್ಗಾವಣೆಯನ್ನು ಮಾಡಿ ಉತ್ತರ ಪತ್ರವನ್ನು ದಿನಾಂಕ: 08-01-2014 ರಂದು ನೀಡಲಾಗಿರುತ್ತದೆ. ಸ್ವತ್ತುಗಳ ಖಾತಾ ವರ್ಗಾವಣೆಯಾದ ನಂತರ ಸ್ವತ್ತುಗಳನ್ನು ಒಂದುಗೂಡಿಸುವಂತೆ ನೋಂದಾಯಿತ ಕ್ರಯ ಪತ್ರಗಳು, ಕಚ್ಚಾ ನಕ್ಷೆ ಮತ್ತು ಅಮಾಲಗಮೇಷನ್ ಡೀಡ್ ಸಲ್ಲಿಸಿದ್ದರ ಮೇರೆಗೆ ಕಂದಾಯ ಪರಿವೀಕ್ಷಕರ ಪಂಕ್ತಿಯ ಸಂಖ್ಯೆ:17 ರಿಂದ 20ರವರೆಗಿನ ಖಾತಾ ಒಂದುಗೂಡಿಸುವ ಪ್ರಸ್ತಾಪನೆಯನ್ನು ನೋಂದಾಯಿತ ಕ್ರಯಪತ್ರಗಳು, ಅಮಾಲಗಮೇಷನ್ ಡೀಡ್, ಕಚ್ಚಾ ನಕ್ಷೆಯಂತೆ ಖಾತಾ ಒಂದುಗೂಡಿಸಲು ಕಂದಾಯ ಅಧಿಕಾರಿಗಳಿಗೆ ಆದೇಶಕ್ಕಾಗಿ ಮಂಡಿಸಿದ್ದು ಕಂದಾಯ ಅಧಿಕಾರಿಗಳು ಪಂಕ್ತಿಯ 24 ರಂತೆ ಅನುಮೋದಿಸಿ ಪಂಕ್ತಿಯ ಸಂಖ್ಯೆ:25 ರಲ್ಲಿ

ಷರತ್ತುಗೊಳಪಡಿಸಿ ಖಾತಾ ಒಂದುಗೂಡಿಸುವ ಪ್ರಸ್ತಾವನೆಯನ್ನು ಅನುಮೋದಿಸಿ ಆದೇಶಿಸಿದ ಮೇರೆಗೆ ವಿಶೇಷ ಸೂಚನ ಪತ್ರವನ್ನು ನೀಡಲಾಗಿದೆ ಎಂದು ಬಿಬಿಎಂಪಿ., ಕಛೇರಿ ಟಿಪ್ಪಣಿ ಹಾಳೆಯ ಪ್ರತಿಗಳನ್ನು ಹಾಗೂ ದಿನಾಂಕ:02-02-2015 ರ ವಿಶೇಷ ಸೂಚನ ಪತ್ರವನ್ನು ಹಾಜರುಪಡಿಸಿರುತ್ತಾರೆ.

11. 5ನೇ ಎದುರುದಾರರಾದ **ಶ್ರೀರಾಮದಾಸ್, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ, ಬಿಬಿಎಂಪಿ, ಬೆಂಗಳೂರು ರವರು** ತಮ್ಮ ದಿನಾಂಕ:12-12-2018 ರ ಆಕ್ಷೇಪಣೆಯಲ್ಲಿ, ಸಹಾಯಕ ಕಂದಾಯ ಅಧಿಕಾರಿ ಮತ್ತು ಕಂದಾಯ ಅಧಿಕಾರಿಯವರ ಪ್ರಸ್ತಾಪನೆ, ಅನುಮೋದನೆಯ ಆದೇಶದಂತೆ ದಿನಾಂಕ:02-02-2015 ರಂದು ನೀಡಲಾಗಿರುವ ವಿಶೇಷ ಸೂಚನ ಪತ್ರವನ್ನು ಮತ್ತೊಮ್ಮೆ ಪರಿಶೀಲಿಸಿ ಕ್ರಯಪತ್ರಗಳ ಆಧಾರದಂತೆ ತಿದ್ದುಪಡಿ ಮಾಡಿ ಖಾತಾ ಒಂದುಗೂಡಿಸಿದ ಅಳತೆಗೂ ಮತ್ತು ಮರುಪರಿಶೀಲಿಸಿರುವ ಸ್ವತ್ತಿನ ಅಳತೆಗೂ ವ್ಯತ್ಯಾಸ ಇರುವುದು ಕಂಡುಬಂದಿರುವುದರಿಂದ ಕಂದಾಯ ಪರಿವೀಕ್ಷರ ಆದೇಶ ಟಿಪ್ಪಣಿ ಪಂಕ್ತಿಯ ಸಂಖ್ಯೆ:32 ರಿಂದ 35 ರವರೆಗಿನ ವರದಿಯಂತೆ, ಸಹಾಯಕ ಕಂದಾಯ ಅಧಿಕಾರಿ , ಕೆಂಪೇಗೌಡನಗರ ರವರು ಪಂಕ್ತಿ ಸಂಖ್ಯೆ:36 ರಲ್ಲಿನ ಶಿಫಾರಸ್ಸಿನೊಂದಿಗೆ ವಿಶೇಷ ಸೂಚನ ಪತ್ರವನ್ನು ನೀಡುವ ಪ್ರಸ್ತಾಪನೆಯನ್ನು ದಿನಾಂಕ:20-05-2016 ರಂದು ಆದೇಶಕ್ಕಾಗಿ ಕಂದಾಯ ಅಧಿಕಾರಿ ಚಿಕ್ಕಪೇಟೆಯವರಿಗೆ ಸಲ್ಲಿಸಿದ್ದು ವಿಶೇಷ ಸೂಚನ ಪತ್ರವನ್ನು ನೀಡುವ ಪ್ರಸ್ತಾಪನೆಯನ್ನು ಅನುಮೋದಿಸಿ ಮೇಲಾಧಿಕಾರಿಯವರ ಆದೇಶದಂತೆ ವಿಶೇಷ ಸೂಚನ ಪತ್ರವನ್ನು ದಿನಾಂಕ:27-05-2016 ರಂದು ಅರ್ಜಿದಾರರಿಗೆ ನೀಡಿಲಾಗಿದೆ ಎಂದು ಹೇಳಿಕೊಂಡಿರುತ್ತಾರೆ.

12. ಎದುರುದಾರರ ಆಕ್ಷೇಪಣೆಗೆ ದೂರುದಾರರು ತಮ್ಮ ದಿನಾಂಕ:04-01-2022 ರ ಪ್ರತ್ಯುತ್ತರದಲ್ಲಿ ಸರಿಯಾಗಿ ಕ್ರಯ ದಾಖಲೆಗಳನ್ನು ಪರಿಶೀಲನೆ ಮಾಡದೇ ಕಾನೂನು ಬಾಹಿರವಾಗಿ 2400 ಅಡಿಗಳಿಗೆ ಮಂಜೂರಾತಿ ನಕ್ಷೆಯನ್ನು ನೀಡಿರುವ ಸಹಾಯಕ

ಕಾರ್ಯನಿರ್ವಹಕ ಅಭಿಯಂತರರು/1ನೇ ಎದುರುದಾರರು ಮತ್ತು ಕಿರಿಯ ಅಭಿಯಂತರರು/2ನೇ ಎದುರುದಾರರು, ಕೆಂಪೇಗೌಡನಗರ ವಿಭಾಗ, ಬಿಬಿಎಂಪಿ., ಬೆಂಗಳೂರು ರವರ ವಿರುದ್ದ ಕ್ರಮ ಕೈಗೊಳ್ಳಬೇಕೆಂದು ಕೋರಿಕೊಂಡಿರುತ್ತಾರೆ.

13. ದೂರುದಾರರ ದೂರಿನ ಅಂಶಗಳು, ದಾಖಲೆಗಳು ಹಾಗೂ ಎದುರುದಾರರ ಆಕ್ಷೇಪಣೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು. ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಸುಂಕೆನಹಳ್ಳಿ ಫ್ವಾರ್ಡ್ ನಂ:142, ಮುನ್ಸಿಪಲ್ ಸಂಖ್ಯೆ:23, ಮೌಂಟ್ ಜಾಯ್ ರಸ್ತೆ, ಹನುಮಂತನಗರ, ಬೆಂಗಳೂರು ರ ಸ್ವತ್ತಿನ ವಿಳಾಸದ ಸ್ಥಳದ ಒಟ್ಟು ವಿಸ್ತೀರ್ಣ 2400 ಅಡಿಗಳು ಮಾತ್ರ ಇದ್ದು, ಸದರಿ ಸ್ವತ್ತಿನ ಪೈಕಿ ಕೇವಲ 1820 ಅಡಿ ವಿಸ್ತೀರ್ಣದ ಸ್ವತ್ತನ್ನು ಮಾತ್ರ ಶ್ರೀಮತಿ ಎಂ.ಪಿ. ಜಯಶ್ರೀ, ಶ್ರೀಮತಿ ಎಂ.ಪಿ.ಜಯಲಕ್ಷ್ಮಿ ಮತ್ತು ಶ್ರೀ ಎಂ.ಪಿ. ಪ್ರವೀಣ್ ರವರು ವಿವಿಧ ಅಳತೆಗಳಲ್ಲಿ ಕ್ರಮವಾಗಿ ಅಂದರೆ 510 ಅಡಿಗಳು, 200 ಅಡಿಗಳು, 400 ಅಡಿಗಳು, 200 ಅಡಿಗಳು ಮತ್ತು 510 ಅಡಿಗಳು ಒಟ್ಟು 1820 ಅಡಿ ಖರೀದಿಸಿ ತಮ್ಮ ಸ್ವತ್ತುಗಳ ಖಾತಾವನ್ನು ಒಂದುಗೂಡಿಸಲು ಸದರಿ ಮಾಲೀಕರು ನೀಡಿರುವ ಅರ್ಜಿಗೆ ಸಂಬಂಧಪಟ್ಟಂತೆ ಕ್ರಯಪತ್ರಗಳನ್ನು ಸರಿಯಾಗಿ ಪರಿಶೀಲಿಸದೇ ಒಟ್ಟು ವಿಸ್ತೀರ್ಣ 2400 ಗಳಿಗೂ ಸಹ ಮಂಜೂರಾತಿ ನಕ್ಷೆಯನ್ನು ನೀಡಿ **1 ಮತ್ತು 2ನೇ ಎದುರುದಾರರಾದ ಸಹಾಯಕ ಕಾರ್ಯಪಾಲಕ ಅಭಿಯಂತರು/ಶ್ರೀ ರಾಥೋಡ್ ಮತ್ತು ಕಿರಿಯ ಅಭಿಯಂತರರು /ಶ್ರೀ ಪ್ರದೀಪ್, ಕೆಂಪೇಗೌಡನಗರ ವಿಭಾಗ, ಬಿಬಿಎಂಪಿ., ಬೆಂಗಳೂರು** ರವರು ಕರ್ತವ್ಯಲೋಪವೆಸಗಿ ಕಾನೂನು ಬಾಹಿರವಾಗಿ ಮಂಜೂರಾತಿ ನಕ್ಷೆಯನ್ನು ನೀಡಿದ್ದಾರೆ ಎಂಬುದು ದೂರುದಾರರ ಆಪಾದನೆ ಆಗಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಅರ್ಜಿದಾರರಾದ ಶ್ರೀಮತಿ ಎಂ.ಪಿ.ಜಯಶ್ರೀ, ಶೀಮತಿ ಎಂ.ಪಿ.ಜಯಲಕ್ಷ್ಮಿ ಮತ್ತು ಶ್ರೀ ಎಂ.ಪಿ. ಪ್ರವೀಣ್ ರವರ ಸ್ವತ್ತಿಗೆ ಸಂಬಂಧಪಟ್ಟಂತೆ 2400 ಚದರ ಅಡಿಗಳ ಸ್ವತ್ತಿಗೆ ಮಂಜೂರು ನಕ್ಷೆಯನ್ನು ನೀಡಿರುವುದು 1 ಮತ್ತು 2ನೇ ಎದುರುದಾರರು ಅಲ್ಲಗಳೆದಿರುವುದಿಲ್ಲ. ಆದರೆ, ಇದಕ್ಕೆ 1 ಮತ್ತು 2ನೇ ಎದುರುದಾರರು ನೀಡಿರುವ ಸಮಜಾಯಿಷಿ ಏನೆಂದರೆ, ಅರ್ಜಿದಾರರು

ನೀಡಿರುವ ಕ್ರಯ ಪತ್ರಗಳು, ದಿನಾಂಕ:23-02-2016 ರ ಖಾತಾ ಪ್ರತಿಯಂತೆ 2400 ಅಡಿಗಳು ಸ್ವತ್ತಿನ ಅಳತೆ ಇದುದ್ದರಿಂದ ಹಾಗೂ ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ರವರ ದಿನಾಂಕ:02-02-2015 ರ ವಿಶೇಷ ಸೂಚನ ಪತ್ರವನ್ನು ಆಧಾರಿಸಿ ನಕ್ಷೆಯನ್ನು ದಿನಾಂಕ:31-03-2016 ರಂದು ನೀಡಿರುವುದಾಗಿ ಹೇಳಿಕೊಂಡಿರುತ್ತಾರೆ.

14. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, 1 ಮತ್ತು 2ನೇ ಎದುರುದಾರರ ಪ್ರಕಾರ ಅರ್ಜಿದಾರರು ಖಾತೆ ಒಗ್ಗೂಡಿಸಲು ಅರ್ಜಿಯ ಜೊತೆಗೆ ಸಲ್ಲಿಸಿರುವ ಕ್ರಯ ಪತ್ರಗಳು ಹಾಗೂ ದಿನಾಂಕ:23-02-2016 ರ ಖಾತಾ ವಹಿಯನ್ನು 1 ಮತ್ತು 2ನೇ ಎದುರುದಾರರು ಪರಿಶೀಲಿಸಿ ಅದರಂತೆ 2400 ಅಡಿಗಳ ವಿಸ್ತೀರ್ಣಕ್ಕೆ ನಕ್ಷೆ ಮಂಜೂರು ಮಾಡಿರುವುದು ಇರುತ್ತದೆ. ಈ ಬಗ್ಗೆ 1 ಮತ್ತು 2ನೇ ಎದುರುದಾರರು ಉಲ್ಲೇಖಿಸಿರುವ ದಿನಾಂಕ:02-02-2015 ರ ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ ರವರ ವಿಶೇಷ ಸೂಚನ ಪತ್ರವನ್ನು ಪರಿಶೀಲಿಸಿದಾಗ, ಪ್ರಸ್ತಾಪಿತ ಸ್ವತ್ತಿನ ಸಂಖ್ಯೆ:23, 23/1, 23/2, 23/3, 23/4 ಮತ್ತು 23/5ರ ಸ್ವತ್ತಿನ ಒಟ್ಟು ಅಳತೆ 2400 ಚದರ ಅಡಿಗಳ ಸ್ವತ್ತಿನ ಅಳತೆಗಳನ್ನು ಅಮಾಲಗಮೇಷನ್ ಡೀಡ್ ಆಧಾರದ ಮೇಲೆ ಖಾತಾ ಒಂದುಗೂಡಿಸಿರುವುದು ಕಂಡುಬರುತ್ತದೆ. ಈ ಬಗ್ಗೆ ದಿನಾಂಕ:23-02-2016 ರ ಖಾತಾ ವಹಿಯಲ್ಲಿಯೂ ಸಹ 2400 ಚದರ ಅಡಿ ವಿಸ್ತೀರ್ಣಕ್ಕೆ ಖಾತಾ ನೀಡಿರುವುದು ಕಂಡುಬರುತ್ತದೆ. ಆದರೆ, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಕಂದಾಯ ಅಧಿಕಾರಿಯವರು ನೀಡಿರುವ ದಿನಾಂಕ:27-05-2016 ರ ತಿದ್ದುಪಡಿ ವಿಶೇಷ ಸೂಚನ ಪತ್ರವನ್ನು ಪರಿಶೀಲಿಸಿದಾಗ, ದಿನಾಂಕ:02-02-2015 ರಂದು ನೀಡಿರುವ ಖಾತಾ ಒಂದುಗೂಡಿಸಿದ ಸೂಚನ ಪತ್ರವನ್ನು ಪರಿಶೀಲಿಸಿ, ಸ್ವತ್ತುಗಳ ಒಂದುಗೂಡಿಸಿದ ಒಟ್ಟು ಅಳತೆ 2400 ಚದರ ಅಡಿಗಳು ಒಂದುಗೂಡಿಸಿದ ಅಳತೆಗಳಲ್ಲಿ ವ್ಯತ್ಯಾಸ ಇರುವುದಾಗಿ ತಿಳಿದು ಬಂದಿದ್ದರ ಮೇರೆಗೆ ಪುನ: ಮತ್ತೆ ಸಹಾಯಕ ಕಂದಾಯ ಅಧಿಕಾರಿಯವರು ಒಂದುಗೂಡಿಸಿದ ಸ್ವತ್ತಿನ ಒಟ್ಟು ಅಳತೆ 1820 ಚದರ ಅಡಿಗಳೆಂದು

No:Compt/Uplok/BCD-2186/2017/ARLO-1

ದಿನಾಂಕ:27-05-2016ರ ತಿದ್ದುಪಡಿ ವಿಶೇಷ ಸೂಚನ ಪತ್ರವನ್ನು ಹೊರಡಿಸಿರುವುದು ಕಂಡುಬರುತ್ತದೆ. ಆದರೆ, ಕ್ರಯ ಪತ್ರಗಳನ್ನು ಪರಿಶೀಲಿಸಿದಾಗ, ದಿನಾಂಕ:12-02-2014 ರ ಕ್ರಯಪತ್ರದಂತೆ ಶ್ರೀಮತಿ ಎಂ.ಪಿ. ಜಯಶ್ರೀ ಮತ್ತು ಶ್ರೀಮತಿ ಎಂ.ಪಿ. ಜಯಲಕ್ಷ್ಮಿ ರವರು 510 ಚದರ ಅಡಿಗಳ ಸ್ವತ್ತನ್ನು, ದಿನಾಂಕ: 09-04-2014 ರ ಕ್ರಯಪತ್ರದಂತೆ ಶ್ರೀಮತಿ ಎಂ.ಪಿ. ಜಯಶ್ರೀ ಮತ್ತು ಶ್ರೀಮತಿ ಎಂ.ಪಿ.ಜಯಲಕ್ಷ್ಮಿ ರವರು 200 ಅಡಿಗಳ ಸ್ವತ್ತನ್ನು, ದಿನಾಂಕ:12-3-2014 ರ ಕ್ರಯಪತ್ರದಂತೆ ಶ್ರೀ ಎಂ.ಪಿ. ಪ್ರವೀಣ್ ರವರು 400 ಚದರ ಅಡಿಯ ಸ್ವತ್ತನ್ನು, ದಿನಾಂಕ:9-4-2014 ರ ಕ್ರಯಪತ್ರದಂತೆ ಶ್ರೀಮತಿ ಎಂ.ಪಿ. ಜಯಶ್ರೀ ಮತ್ತು ಶ್ರೀಮತಿ ಎಂ.ಪಿ. ಜಯಲಕ್ಷ್ಮಿ ರವರು 200 ಚದರ ಅಡಿಗಳ ಸ್ವತ್ತನ್ನು ಮತ್ತು ದಿನಾಂಕ:9-6-2014 ರ ಕ್ರಯಪತ್ರದಂತೆ, ಶ್ರೀಮತಿ ಎಂ.ಪಿ. ಜಯಶ್ರೀ ಮತ್ತು ಶ್ರೀಮತಿ ಜಯಲಕ್ಷ್ಮಿ ರವರು 510 ಚದರ ಅಡಿಯ ವಿಸ್ತೀರ್ಣ ಸ್ವತ್ತನ್ನು ಅಂದರೆ, ಒಟ್ಟು 1820 ಚದರ ಅಡಿಗಳ ಸ್ವತ್ತನ್ನು ಶ್ರೀಮತಿ ಎಂ.ಪಿ.ಜಯಶ್ರೀ, ಶ್ರೀಮತಿ ಎಂ.ಪಿ.ಜಯಲಕ್ಷ್ಮಿ ಮತ್ತು ಶ್ರೀ ಎಂ.ಪಿ. ಪ್ರವೀಣ್ ರವರು ಖರೀದಿಸಿರುವುದು ಕಂಡುಬರುತ್ತದೆ. ಮೇಲಾಗಿ ಸದರಿ ಕ್ರಯ ಪತ್ರಗಳ ಶೆಡ್ಯೂಲ್‌ಗಳನ್ನು ಪರಿಶೀಲಿಸಿದಾಗ, ಸದರಿ ಸ್ವತ್ತಿಗೆ ಕಾಮನ್ ಪ್ಯಾಸೇಜ್ ಇರುವುದು ಕಂಡುಬರುತ್ತದೆ. ಆದರೆ, ಸದರಿ ಕಾಮನ್ ಪ್ಯಾಸೇಜ್‌ನಲ್ಲಿ ಎಲ್ಲರಿಗೂ ಸೇರಿರುವ ಹಕ್ಕು ಇದ್ದು ಪ್ಯಾಸೇಜ್ ಖರೀದಿಸಿರುವ ಬಗ್ಗೆ ಕ್ರಯ ಪತ್ರಗಳಲ್ಲಿ ಉಲ್ಲೇಖ ಇರುವುದಿಲ್ಲ. ಇದರಿಂದ ಅರ್ಜಿದಾರರು ಕೇವಲ 1820 ಚದರ ಅಡಿ ಜಾಗವನ್ನು ಮಾತ್ರ ಖರೀದಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅನೋಂದಾಯಿತ ಡೀಡ್ ಆಫ್ ಅಮಾಲಗಮೇಷನ್ ಅನ್ನು ಪರಿಶೀಲಿಸಿದಾಗ, ಅದರಲ್ಲಿಯೂ ಸಹ ಕೇವಲ 1820 ಚದರ ಅಡಿಗಳ ಸ್ವತ್ತನ್ನು ಖರೀದಿಸಿರುವ ಬಗ್ಗೆ ಉಲ್ಲೇಖ ಇರುವುದು ಕಂಡುಬರುತ್ತದೆ. ಆದರೆ, ಡೀಡ್ ಆಫ್ ಅಮಾಲಗಮೇಷನ್‌ನ ಶೆಡ್ಯೂಲ್‌ನ ವಿವರದಲ್ಲಿ ಒಟ್ಟು 2400 ಚದರ ಅಡಿಗಳ ವಿಸ್ತೀರ್ಣವನ್ನು ತೋರಿಸಿರುವುದು ಕಂಡುಬರುತ್ತದೆ ಹಾಗೂ ಶೆಡ್ಯೂಲ್ ನಲ್ಲಿ ಕಾಮನ್ ಪ್ಯಾಸೇಜ್ ಮತ್ತು ಸ್ವತ್ತನ್ನು ಇರುವುದು ಸಹ ಉಲ್ಲೇಖಿಸಿರುತ್ತಾರೆ. ಇದನ್ನು

ಪರಿಶೀಲಿಸಿದಾಗ, ಕಾಮನ್ ಪ್ಯಾಸೇಜ್‌ಅನ್ನು ಸೇರಿಸಿ 2400 ಚದರ ಅಡಿಗಳ ವಿಸ್ತೀರ್ಣ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದರೆ, ಮೇಲೆ ಈಗಾಗಲೇ ಉಲ್ಲೇಖಿಸಿರುವ ವಿವಿಧ ಕ್ರಯ ಪತ್ರಗಳಲ್ಲಿ, ಕಾಮನ್ ಪ್ಯಾಸೇಜ್ ಖರೀದಿಸಿರುವ ಬಗ್ಗೆ ಉಲ್ಲೇಖ ಇರುವುದಿಲ್ಲ. 1820 ಚದರ ಅಡಿ ವಿಸ್ತೀರ್ಣ ಖರೀದಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

15. 1 ಮತ್ತು 2ನೇ ಎದುರುದಾರರು ದಿನಾಂಕ:31–03–2016 ರಂದು ನಕ್ಷೆ ಮಂಜೂರಾತಿಯನ್ನು 2400 ಚದರ ಅಡಿಗಳಿಗೆ ನೀಡಿದ ನಂತರ ಆ ವಿಸ್ತೀರ್ಣವನ್ನು 1820 ಚದರ ಅಡಿ ಎಂದು ತಿದ್ದುಪಡಿ ಮಾಡಿ ದಿನಾಂಕ:27–05–2016 ರಂದು ಆ ಹಿಂದೆ 2400 ಚದರ ಅಡಿ ವಿಸ್ತೀರ್ಣಕ್ಕೆ ಹೊರಡಿಸಿದ ದಿನಾಂಕ:02–02–2015 ರ ವಿಶೇಷ ಸೂಚನ ಪತ್ರಕ್ಕೆ ವ್ಯತಿರಿಕ್ತವಾಗಿ ದಿನಾಂಕ:27–05–2016 ರ ತಿದ್ದುಪಡಿ ವಿಶೇಷ ಸೂಚನ ಪತ್ರವನ್ನು ನೀಡಿರುವುದು ಕಂಡುಬರುತ್ತದೆ. ಆದರೆ, ಸದರಿ ಸ್ವತ್ತಿನ ವಿಸ್ತೀರ್ಣ 1820 ಚದರ ಅಡಿ ಎಂದು ತಿದ್ದುಪಡಿ ವಿಶೇಷ ಸೂಚನ ಪತ್ರವನ್ನು ಕಂದಾಯ ಅಧಿಕಾರಿಗಳು 1 ಮತ್ತು 2ನೇ ಎದುರುದಾರರಾದ ಅಭಿಯಂತರರು ದಿನಾಂಕ: 31–03–2016 ರ ನಕ್ಷೆ ಮಂಜೂರಾತಿ ಮಾಡಿರುವ ನಂತರ ತಿದ್ದುಪಡಿ ವಿಶೇಷ ಸೂಚನ ಪತ್ರ ಹೊರಡಿಸಿದ್ದಾರೆ ಎನ್ನುವ ಕಾರಣ ನೀಡಿ ಇದು ಕೇವಲ ಕಂದಾಯ ಅಧಿಕಾರಿಗಳ ತಪ್ಪಿನಿಂದ ಆಗಿರುವ ಕ್ರಮವಾಗಿದೆ ಎಂದು ತಾವು ನೀಡಿರುವ ದಿನಾಂಕ:31–03–2016 ರ ನಕ್ಷೆ ಮಂಜೂರಾತಿ ಸರಿಯಾದ ಕ್ರಮ ಎಂಬ 1 ಮತ್ತು 2ನೇ ಎದುರುದಾರರ ಅಭಿಯಂತರರ ಪ್ರತಿಪಾದನೆ ಒಪ್ಪಲು ಸಾಧ್ಯವಿಲ್ಲ. ಕಾರಣ, ತಮ್ಮ ಆಕ್ಷೇಪಣೆಗಳಲ್ಲಿಯೇ ಅರ್ಜಿದಾರರು ನಕ್ಷೆ ಮಂಜೂರಾತಿ ಕೋರಿ ಸಲ್ಲಿಸಿದ ಅರ್ಜಿಯೊಂದಿಗೆ ಹಾಜರುಪಡಿಸಿದ ಕ್ರಯ ಪತ್ರಗಳು, ದಿನಾಂಕ:23–02–2016 ರ ಖಾತಾ ವಹಿ ಮತ್ತು ದಿನಾಂಕ: 02–02–2015 ರ ಸಹಾಯಕ ಕಂದಾಯ ಅಧಿಕಾರಿಯವರ ವಿಶೇಷ ಸೂಚನ ಪತ್ರವನ್ನು ಪರಿಶೀಲಿಸಿ, ಜೊತೆಗೆ ಸ್ಥಳ ಪರಿಶೀಲನೆ ಮಾಡಿ 2400 ಚದರ ಅಡಿಗಳಿಗೆ ದಿನಾಂಕ:31–03–2016 ರಂದು ನಕ್ಷೆ ಮಂಜೂರು ಮಾಡಲಾಗಿರುತ್ತದೆ ಎಂದು 1 ಮತ್ತು

2ನೇ ಎದುರುದಾರರು ಹೇಳಿಕೊಂಡಿರುತ್ತಾರೆ. ಆದರೆ, ಈಗಾಗಲೇ ಉಲ್ಲೇಖಿಸಿರುವಂತೆ 1 ಮತ್ತು 2ನೇ ಎದುರುದಾರರು ಅರ್ಜಿದಾರರು ಹಾಜರುಪಡಿಸಿರುವ ಕ್ರಯ ಪತ್ರಗಳಲ್ಲಿನ ವಿಸ್ತೀರ್ಣವನ್ನು ಪರಿಶೀಲಿಸದೇ ದಿನಾಂಕ:23-02-2016 ರ ಸ್ವತ್ತಿನ ಖಾತಾ ವಹಿಯ ಪ್ರಕಾರ 2400 ಚದರ ಅಡಿಗಳಿಗೆ ನಕ್ಷೆ ಮಂಜೂರು ಮಾಡಿ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

16. 1 ಮತ್ತು 2ನೇ ಎದುರುದಾರರು ತಮಗೆ ಅರ್ಜಿದಾರರಿಂದ ಖಾತಾ ಒಂದುಗೂಡಿಸುವ ಬಗ್ಗೆ ಅರ್ಜಿ ಹಾಗೂ ದಾಖಲೆಗಳು ಸಲ್ಲಿಕೆಯಾದ ಕೂಡಲೇ ಮಂಜೂರಾತಿ ನಕ್ಷೆ ನೀಡುವ ಮೊದಲು ಕ್ರಯ ಪತ್ರಗಳಲ್ಲಿನ ವಿಸ್ತೀರ್ಣವನ್ನು, ದಿನಾಂಕ:23-2-2016 ರ ಖಾತಾ ವಹಿಯಲ್ಲಿಯ ವಿಸ್ತೀರ್ಣವನ್ನು ಹಾಗೂ ದಿನಾಂಕ:02-02-2015 ರ ಸಹಾಯಕ ಕಂದಾಯ ಅಧಿಕಾರಿಯವರ ಸೂಚನ ಪತ್ರದಲ್ಲಿ ಉಲ್ಲೇಖಿಸಿರುವ ಅಮಾಲಗಮೇಷನ್ ಡೀಡ್‌ನಲ್ಲಿನ ವಿಸ್ತೀರ್ಣವನ್ನು ಪರಿಶೀಲಿಸಿ ಮಂಜೂರು ನಕಾಶೆ ನೀಡುವ ಜವಬ್ದಾರಿ ಹೊಂದಿರುತ್ತಾರೆ. ಆದರೆ ಈಗಾಗಲೇ ಮೇಲೆ ಉಲ್ಲೇಖಿಸಿರುವಂತೆ ಅರ್ಜಿದಾರರು ಸಲ್ಲಿಸಿದರು ಎಂದು ಉಲ್ಲೇಖಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಕ್ರಯ ಪತ್ರದಂತೆ ಅರ್ಜಿದಾರರು ಖರೀದಿಸಿರುವ ಸ್ವತ್ತಿನ ಒಟ್ಟು ವಿಸ್ತೀರ್ಣ 2400 ಚದರ ಅಡಿ ಆಗದೇ ಕೇವಲ 1820 ಚದರ ಅಡಿ ಇರುವುದು ಮಾತ್ರ ಕಂಡುಬರುತ್ತದೆ. ಹೀಗಾಗಿ, ಮಂಜೂರಾತಿ ನಕ್ಷೆ ನೀಡುವ ಮುಂಚೆಯೆ ಅರ್ಜಿದಾರರು ಹಾಜರುಪಡಿಸಿದ ಮೇಲ್ಕಂಡ ಉಲ್ಲೇಖಿತ ದಾಖಲೆಗಳಲ್ಲಿನ ವಿಸ್ತೀರ್ಣವನ್ನು ಪರಿಶೀಲಿಸಿ ವಿಸ್ತೀರ್ಣದ ವ್ಯತ್ಯಾಸ ಕಂಡುಬಂದ ಸಂದರ್ಭದಲ್ಲಿ ಕಂದಾಯ ಅಧಿಕಾರಿಗಳಿಂದ ಸ್ಪಷ್ಟೀಕರಣ ಕೇಳದೇ ಕಂದಾಯ ಅಧಿಕಾರಿಗಳ ದಿನಾಂಕ:27-05-2016 ರ ತಿದ್ದುಪಡಿ ಸೂಚನ ಪತ್ರವನ್ನು ಗಮನಕ್ಕೆ ಬಂದ ನಂತರ ಕಂದಾಯ ಅಧಿಕಾರಿಯವರಿಂದ ವಿಸ್ತೀರ್ಣದ ಬಗ್ಗೆ ದಿನಾಂಕ:07-12-2017 ರಂದು 1 ಮತ್ತು 2ನೇ ಎದುರುದಾರರು ಸ್ಪಷ್ಟೀಕರಣ ಕೇಳಿರುವುದು ಕಂಡುಬರುತ್ತದೆ.

17. ಈ ಹಿನ್ನಲೆಯಲ್ಲಿ ಮೇಲೆ ವಿವರಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, 1 ಮತ್ತು 2ನೇ ಎದುರುದಾರರು ನೀಡಿರುವ ಮಂಜೂರಾತಿ ನಕ್ಷೆಯನ್ನು ಪರಿಶೀಲಿಸಿದಾಗ, ಒಟ್ಟು ವಿಸ್ತೀರ್ಣ 222.83 ಚದರ ಮೀಟರಿನ ವಿಸ್ತೀರ್ಣಕ್ಕೆ ಮಂಜೂರಾತಿ ನಕ್ಷೆಯನ್ನು ಅರ್ಜಿದಾರರು ಹಾಜರುಪಡಿಸಿರುವ ಕ್ರಯ ಪತ್ರ ಹಾಗೂ ದಿನಾಂಕ:02-02-2015 ರ ವಿಶೇಷ ಸೂಚನ ಪತ್ರದಲ್ಲಿ ಉಲ್ಲೇಖಿಸಿರುವ ಅಮಾಗಲಮೇಷನ್ ಡೀಡ್‌ನಲ್ಲಿನ ಮತ್ತು ಖಾತಾ ವಹಿಯಲ್ಲಿನ ವಿಸ್ತೀರ್ಣವನ್ನು ಪರಿಶೀಲಿಸದೇ 1820 ಚದರ ಅಡಿಗೆ ಬದಲಾಗಿ 222.83 ಚದರ ಮೀಟರ್‌ಗೆ ಮಂಜೂರಾತಿ ನಕ್ಷೆ ನೀಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 222.83 ಚದರ ಮೀಟರ್ ವಿಸ್ತೀರ್ಣವನ್ನು ಚದರ ಅಡಿಗಳಲ್ಲಿ ಪರಿವರ್ತಿಸಿದಾಗ, 2426.61 ಚದರ ಅಡಿ ವಿಸ್ತೀರ್ಣ ಎಂಬುದು ಕಂಡುಬರುತ್ತದೆ. ಸದರಿ 1 ಮತ್ತು 2ನೇ ಎದುರುದಾರರ ಮೇಲ್ಕಂಡ ಕ್ರಮದಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 2021 ರ ಕಲಂ 3 (I) (i),(ii) & (iii) [ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966] ರಂತೆ ದುರ್ನಡತೆವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

18. 3ನೇ ಎದುರುದಾರಾದ ಶ್ರೀ ಚಂದ್ರಕಾಂತ, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಗಳೂರು ಮತ್ತು 5ನೇ ಎದುರುದಾರರಾದ ಶ್ರೀ ರಾಮದಾಸ್, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರು ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಖಾತೆಯನ್ನು ಒಂದುಗೂಡಿಸುವ ಸಮಯದಲ್ಲಿ ಮತ್ತು ಖಾತೆ ಒಂದುಗೂಡಿಸಿ 2400 ಚದರ ಅಡಿ ವಿಸ್ತೀರ್ಣಕ್ಕೆ ದಿನಾಂಕ:02-02-2015 ರ ವಿಶೇಷ ಸೂಚನ ಪತ್ರವನ್ನು ಹೊರಡಿಸಿರುವ ಸಮಯದಲ್ಲಿ ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರ ಕಚೇರಿಯಲ್ಲಿ ಸಹಾಯಕ ಕಂದಾಯ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿರುವುದು ಕಂಡುಬರುವುದಿಲ್ಲ. ಆದರೆ, ಸದರಿ ವಿಭಾಗದಲ್ಲಿ 3ನೇ ಎದುರುದಾರರು ದಿನಾಂಕ: 01-04-2017 ರಿಂದ ದಿನಾಂಕ:30-09-2018 ರವರೆಗೆ ಕರ್ತವ್ಯ ನಿರ್ವಹಿಸಿರುವುದು

17. ಈ ಹಿನ್ನಲೆಯಲ್ಲಿ ಮೇಲೆ ವಿವರಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, 1 ಮತ್ತು 2ನೇ ಎದುರುದಾರರು ನೀಡಿರುವ ಮಂಜೂರಾತಿ ನಕ್ಷೆಯನ್ನು ಪರಿಶೀಲಿಸಿದಾಗ, ಒಟ್ಟು ವಿಸ್ತೀರ್ಣ 222.83 ಚದರ ಮೀಟರಿನ ವಿಸ್ತೀರ್ಣಕ್ಕೆ ಮಂಜೂರಾತಿ ನಕ್ಷೆಯನ್ನು ಅರ್ಜಿದಾರರು ಹಾಜರುಪಡಿಸಿರುವ ಕ್ರಯ ಪತ್ರ ಹಾಗೂ ದಿನಾಂಕ:02-02-2015 ರ ವಿಶೇಷ ಸೂಚನ ಪತ್ರದಲ್ಲಿ ಉಲ್ಲೇಖಿಸಿರುವ ಅಮಾಗಲಮೇಷನ್ ಡೀಡ್‌ನಲ್ಲಿನ ಮತ್ತು ಖಾತಾ ವಹಿಯಲ್ಲಿನ ವಿಸ್ತೀರ್ಣವನ್ನು ಪರಿಶೀಲಿಸದೇ 1820 ಚದರ ಅಡಿಗೆ ಬದಲಾಗಿ 222.83 ಚದರ ಮೀಟರ್‌ಗೆ ಮಂಜೂರಾತಿ ನಕ್ಷೆ ನೀಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 222.83 ಚದರ ಮೀಟರ್ ವಿಸ್ತೀರ್ಣವನ್ನು ಚದರ ಅಡಿಗಳಲ್ಲಿ ಪರಿವರ್ತಿಸಿದಾಗ, 2426.61 ಚದರ ಅಡಿ ವಿಸ್ತೀರ್ಣ ಎಂಬುದು ಕಂಡುಬರುತ್ತದೆ. ಸದರಿ 1 ಮತ್ತು 2ನೇ ಎದುರುದಾರರ ಮೇಲ್ಕಂಡ ಕ್ರಮದಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 2021 ರ ಕಲಂ 3 (I) (i),(ii) & (iii) [ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966] ರಂತೆ ದುರ್ನಡತೆವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

18. **3ನೇ ಎದುರುದಾರಾದ ಶ್ರೀ ಚಂದ್ರಕಾಂತ, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಗಳೂರು ಮತ್ತು 5ನೇ ಎದುರುದಾರರಾದ ಶ್ರೀ ರಾಮದಾಸ್, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರು** ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಖಾತೆಯನ್ನು ಒಂದುಗೂಡಿಸುವ ಸಮಯದಲ್ಲಿ ಮತ್ತು ಖಾತೆ ಒಂದುಗೂಡಿಸಿ 2400 ಚದರ ಅಡಿ ವಿಸ್ತೀರ್ಣಕ್ಕೆ ದಿನಾಂಕ:02-02-2015 ರ ವಿಶೇಷ ಸೂಚನ ಪತ್ರವನ್ನು ಹೊರಡಿಸಿರುವ ಸಮಯದಲ್ಲಿ ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರ ಕಚೇರಿಯಲ್ಲಿ ಸಹಾಯಕ ಕಂದಾಯ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿರುವುದು ಕಂಡುಬರುವುದಿಲ್ಲ. ಆದರೆ, ಸದರಿ ವಿಭಾಗದಲ್ಲಿ 3ನೇ ಎದುರುದಾರರು ದಿನಾಂಕ: 01-04-2017 ರಿಂದ ದಿನಾಂಕ:30-09-2018 ರವರೆಗೆ ಕರ್ತವ್ಯ ನಿರ್ವಹಿಸಿರುವುದು

3ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಿಂದ ಮತ್ತು 5ನೇ ಎದುರುದಾರರು ದಿನಾಂಕ:23-05-2015 ರಿಂದ 31-03-2016 ರವರೆಗೆ ಕರ್ತವ್ಯ ನಿರ್ವಹಿಸಿರುವುದು 5ನೇ ಎದುರುದಾರರು ಹಾಜರುಪಡಿಸಿರುವ ಸೇವಾ ವಿವರಗಳಿಂದ ವ್ಯಕ್ತವಾಗುತ್ತದೆ. ಹೀಗಾಗಿ, 3 ಮತ್ತು 5ನೇ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆ ಎನ್ನುವ ಬಗ್ಗೆ ಯಾವುದೇ ಅಂಶಗಳು ಕಂಡುಬರುವುದಿಲ್ಲ. ಈ ಕಾರಣದಿಂದ 3 ಮತ್ತು 5ನೇ ಎದುರುದಾರರ ವಿರುದ್ಧ ಕ್ರಮವನ್ನು ಕೈಗೊಳ್ಳಲು ಸಾಧ್ಯವಿರುವುದಿಲ್ಲ.

19. **4ನೇ ಎದುರುದಾರರಾದ ಶ್ರೀ ಸಿ. ಲಿಂಗಯ್ಯ, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು** ರವರು ಸದರಿ ವಿಭಾಗದಲ್ಲಿ 2014-15ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿರುವುದು ಅವರು ಹಾಜರುಪಡಿಸಿರುವ ಸೇವಾ ವಿವರದಿಂದ ಕಂಡುಬರುತ್ತದೆ. 4ನೇ ಎದುರುದಾರರು ತಮ್ಮ ಆಕ್ಷೇಪಣೆಯೊಂದಿಗೆ ಹಾಜರುಪಡಿಸಿರುವ ಬಿಬಿಎಂಪಿ., ಕಛೇರಿ ಟಿಪ್ಪಣಿ ಹಾಳೆಯ ಪ್ರತಿಗಳನ್ನು ಪರಿಶೀಲಿಸಿದಾಗ, ಟಿಪ್ಪಣಿ ಕಂಡಿಕೆ-17 ರಿಂದ 20 ರಲ್ಲಿ ಅರ್ಜಿದಾರರು ಹಾಜರುಪಡಿಸಿರುವ ನೋಂದಾಯಿತ ಕ್ರಯಪತ್ರಗಳು, ಅಮಾಲಗಮೇಷನ್ ಡೀಡ್, ಕಚ್ಚಾ ನಕ್ಷೆಗಳನ್ನು ಉಲ್ಲೇಖಿಸಿ ಕಂದಾಯ ಪರಿವೀಕ್ಷಕರು ಮಂಡಿಸಿರುವ ಟಿಪ್ಪಣಿಗೆ ಸಂಬಂಧಪಟ್ಟಂತೆ ಕಂಡಿಕೆ-21 ರಲ್ಲಿ ಅದನ್ನು ಅನುಮೋದಿಸಲು ಪ್ರಸ್ತುತ 4ನೇ ಎದುರುದಾರರಾದ ಶ್ರೀ ಸಿ.ಲಿಂಗಯ್ಯ, ಸಹಾಯಕ ಕಂದಾಯ ಅಧಿಕಾರಿಯವರು ಟಿಪ್ಪಣಿ ಕಂಡಿಕೆ-21 ರಂತೆ ಕಂದಾಯ ಅಧಿಕಾರಿಯವರ ಅನುಮೋದನೆಗೆ ಮಂಡಿಸಿರುವುದು ಕಂಡುಬರುತ್ತದೆ. ಕಂದಾಯ ಪರಿವೀಕ್ಷಕರ ಕ್ರಮ ಸಂಖ್ಯೆ:17 ರಿಂದ 20 ರ ಟಿಪ್ಪಣಿಯನ್ನು ಪರಿಶೀಲಿಸಿದಾಗ, ಟಿಪ್ಪಣಿ ಕಂಡಿಕೆ-18 ರಲ್ಲಿ ಕೇವಲ ಕ್ರಯ ಪತ್ರದ ದಿನಾಂಕಗಳನ್ನು ನಮೂದಿಸಿದ್ದು ವಿಸ್ತೀರ್ಣವನ್ನು ನಮೂದಿಸಿರುವುದಿಲ್ಲ. ಈ ಅಂಶವನ್ನು ಪರಿಶೀಲಿಸದೇ ಹಾಗೂ ಕಂದಾಯ ಪರಿವೀಕ್ಷಕರ ಟಿಪ್ಪಣಿಯನ್ನು ಪರಿಶೀಲಿಸಿ ಕ್ರಯ ಪತ್ರದಂತೆ ಸ್ವತ್ತಿನ ವಿಸ್ತೀರ್ಣ ಇರುವುದನ್ನು ಖಾತ್ರಿಪಡಿಸಿಕೊಳ್ಳದೇ ಪ್ರಸ್ತುತ 4ನೇ ಎದುರುದಾರರು ಟಿಪ್ಪಣಿ ಕಂಡಿಕೆ-21 ರಂತೆ ಅನುಮೋದನೆಗೆ ಮಂಡಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಮೇಲಾಗಿ, ದಿನಾಂಕ:02-02-2015 ರ ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ರವರ ಕಛೇರಿ ವಿಶೇಷ ಸೂಚನ ಪತ್ರವನ್ನು ಪರಿಶೀಲಿಸಿದಾಗ, 2400 ಚದರ ಅಡಿಗಳ ವಿಸ್ತೀರ್ಣಕ್ಕೆ ಸ್ವತ್ತಿನ ಅಳತೆಗಳನ್ನು ಅಮಾಲಗಮೇಷನ್ ಡೀಡ್ ಆಧಾರದ ಮೇಲೆ ಖಾತಾ ಒಂದುಗೂಡಿಸಿದ ಸ್ವತ್ತಿಗೆ ವಿಶೇಷ ಸೂಚನ ಪತ್ರವನ್ನು ಪ್ರಸ್ತುತ 4ನೇ ಎದುರುದಾರರಾದ ಶ್ರೀ ಸಿ. ಲಿಂಗಯ್ಯ, ಸಹಾಯಕ ಕಂದಾಯ ಅಧಿಕಾರಿ ರವರು ಹೊರಡಿಸಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡಬರುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಟಿಪ್ಪಣಿ ಕಂಡಿಕೆ-17 ರಿಂದ 20 ರಲ್ಲಿ ಮಂಡಿಸಿರುವ ಟಿಪ್ಪಣಿಯ ಅಂಶವನ್ನು ಪರಿಶೀಲಿಸಿ ಕ್ರಯಪತ್ರದಂತೆ ವಿಸ್ತೀರ್ಣವನ್ನು ಖಾತ್ರಿಪಡಿಸಿಕೊಳ್ಳದೇ ಕ್ರಯಪತ್ರದಲ್ಲಿ ಕಂಡುಬರುವ 1820 ಚದರ ಅಡಿ ವಿಸ್ತೀರ್ಣಕ್ಕೆ ಬದಲಾಗಿ ಅನೋಂದಾಯಿತ ಅಮಾಲಗಮೇಷನ್ ಡೀಡ್‌ನ ಆಧಾರದ ಮೇಲೆ 4ನೇ ಎದುರುದಾರರು ಖಾತೆ ಒಂದುಗೂಡಿಸುವ ಸಂಬಂಧ ಅನುಮೋದನೆಗಾಗಿ ಕಂದಾಯ ಅಧಿಕಾರಿಯವರಿಗೆ ಮಂಡಿಸಿ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ. ಸದರಿ ದಿನಾಂಕ: 02-02-2015 ರಂದು 4ನೇ ಎದುರುದಾರರು ಹೊರಡಿಸಿರುವ ವಿಶೇಷ ಸೂಚನ ಪತ್ರವನ್ನು ನಂತರದ ಅಧಿಕಾರಿಯು/5ನೇ ಎದುರುದಾರರು ತಿದ್ದುಪಡಿ ಮಾಡಿ ಪುನ: ಕ್ರಯಪತ್ರದ ವಿಸ್ತೀರ್ಣದಂತೆ ತಿದ್ದುಪಡಿ ವಿಶೇಷ ಸೂಚನ ಪತ್ರವನ್ನು ದಿನಾಂಕ:27-5-2016 ರಂದು ಸರಿಪಡಿಸಿ ಹೊರಡಿಸಿರುವುದು ಕಂಡುಬರುತ್ತದೆ. ಹೀಗಾಗಿ, 4ನೇ ಎದುರುದಾರರಾದ ಶ್ರೀ ಸಿ.ಲಿಂಗಯ್ಯ, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

20. ಈ ಮೇಲೆ ವಿವರಿಸಿದ ಎಲ್ಲಾ ಕಾರಣಗಳಿಗಾಗಿ 4ನೇ ಎದುರುದಾರರ ಕ್ರಮದಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 2021 ರ ಕಲಂ 3 (I) (i),(ii) & (iii)

[ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966] ರಂತೆ ದುರ್ನಡತೆವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

21. ಈ ಮೇಲೆ ವಿವರಿಸಿದ ಕಾರಣಗಳಿಂದಾಗಿ, ಪ್ರಸ್ತುತ ದೂರು ಪ್ರಕರಣದಲ್ಲಿ, 1 ನೇ ಎದುರುದಾರರಾದ ಶ್ರೀ ರಾಥೋಡ್, ಸಹಾಯಕ ಕಾರ್ಯಪಾಲಕ ಅಭಿಯಂತರು, 2ನೇ ಎದುರುದಾರರಾದ ಶ್ರೀ ಪ್ರದೀಪ್, ಕಿರಿಯ ಅಭಿಯಂತರರು ಮತ್ತು 4ನೇ ಎದುರುದಾರರಾದ ಶ್ರೀ ಸಿ. ಲಿಂಗಯ್ಯ, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರುಗಳ ವಿರುದ್ದ ಶಿಸ್ತು ಕ್ರಮ ಜರುಗಿಸುವಂತಹ ಅಂಶಗಳು ಮೇಲ್ನೋಟಕ್ಕೆ ಕಂಡುಬರುತ್ತವೆ.

22. ಮೇಲೆ ಚರ್ಚಿಸಿರುವ ಕಾರಣಗಳಿಂದಾಗಿ,1ನೇ ಎದುರುದಾರರಾದ ಶ್ರೀ ರಾಥೋಡ್, ಸಹಾಯಕ ಕಾರ್ಯಪಾಲಕ ಅಭಿಯಂತರು, 2ನೇ ಎದುರುದಾರರಾದ ಶ್ರೀ ಪ್ರದೀಪ್, ಕಿರಿಯ ಅಭಿಯಂತರರು ಮತ್ತು 4ನೇ ಎದುರುದಾರರಾದ ಶ್ರೀ ಸಿ. ಲಿಂಗಯ್ಯ, ಸಹಾಯಕ ಕಂದಾಯ ಅಧಿಕಾರಿ, ಕೆಂಪೇಗೌಡನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ರವರುಗಳು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 2021 ರ ನಿಯಮ 3 (I) (i),(ii) & (iii) ರಂತೆ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಸದರಿ ಎದುರುದಾರರ ವಿರುದ್ಧ ಕ.ಸ.ಸೇ.ನಿ ಗಳ ಅಡಿಯಲ್ಲಿ ಶಿಸ್ತು ಕ್ರಮವನ್ನು ಶಿಸ್ತು ಪ್ರಾಧಿಕಾರದ ಮೂಲಕ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

23. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು

ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ಅನುಸರಣಾ ವರದಿಯನ್ನು ಸಲ್ಲಿಸುವಂತೆ ಕೋರಲಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಲಾಗಿದೆ.

19/4/22

[ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.